**<u>ಹೆಚ್ಚುವರಿ ಸಿವಿಲ್ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಚಿಂಚೋಳಿ</u>**

**ಸಿಸಿ ನಂ. 101/2018**

| | | | |
|---|---|---|---|
| **ಹೆಸರು** | : | **ಲಲಿತಾ** | **ಚಾ.ಸಾ11** |
| **ಗಂಡನ ಹೆಸರು** | : | **ನಾರಾಯಣ** | **ಪ್ರಾ.ಸಾ.11** |
| **ವಯಸ್ಸು** | : | **40 ವರ್ಷ** | **ದಿನಾಂಕಃ 11-07-2023** |
| **ಉದ್ಯೋಗ** | : | **ಗೃಹಿಣಿ** | |
| **ವಾಸಸ್ಥಳ** | : | **ರಾಯಕೋಡ** | |

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ</u>**

ಆರೋಪಿತರು ನನಗೆ ಗೊತ್ತು. ಪ್ರಾಸಾ-5 ನನ್ನ ಗಂಡ. ಪ್ರಾಸಾ-3 ನಮ್ಮ ಮನೆ ಪಕ್ಕದವರು. ಉಳಿದ ಸಾಕ್ಷಿದಾರರು ನನಗೆ ಗೊತ್ತು.

2016 ರಲ್ಲಿ ಪ್ರಾಸಾ-3 ರವರ ಮದುವೆ 1ನೇ ಆರೋಪಿ ಜೊತೆ ರಾಯಕೋಡದಲ್ಲಿನ ಶಿವಲಿಂಗೇಶ್ವರ ಮಠದಲ್ಲಿ ಆಗಿರುತ್ತದೆ. ಪ್ರಾಸಾ-3 ರವರ ಮದುವೆ ಸಮಯಕ್ಕೆ ಪ್ರಾಸಾ-3 ರವರ ತಂದೆ ತಾಯಿ 1ನೇ ಆರೋಪಿಗೆ ಎರಡು ಲಕ್ಷ ಹಣ ಆರು ತೊಲೆ ಬಂಗಾರ ಕೊಟ್ಟು ಮದುವೆ ಮಾಡಿರುತ್ತಾರೆ. ಒಂದು ತಿಂಗಳ ಕಾಲ 1ನೇ ಆರೋಪಿ ಪ್ರಾಸಾ-3 ರವರಿಗೆ ಸರಿಯಾಗಿ ನೋಡಿಕೊಂಡು 1 ಮತ್ತು ಎರಡನೆ ಆರೋಪಿತರು ಸೇರಿ ಪ್ರಾಸಾ-3 ರವರಿಗೆ ಬಂಗಾರ ಹಾಗೂ ಹಣ ತವರು ಮನೆಯಿಂದ ಪಡೆದುಕೊಂಡು ಬರಲು ಕಿರುಕುಳ ನೀಡುತಿದ್ದರು. ಪ್ರಾಸಾ-3 ರವರು ರಾಯಕೋಡದಲ್ಲಿರುವ ತವರು ಮನೆಗೆ ಬಂದಾಗ ನಾನು ಪ್ರಾಸಾ-3 ರವರ ಮನೆಗೆ ಹೋಗುತ್ತಿದ್ದೆ , ಅಗ ಪ್ರಾಸಾ-3 ರವರು ನನಗೆ 1 ಹಾಗೂ ಎರಡನೆ ಆರೋಪಿತರು ಸೇರಿ ಹಣ ಹಾಗೂ ಬಂಗಾರ ತವರು ಮನೆಯಿಂದ ಪಡೆದುಕೊಂಡು ಬರಲು ಕಿರಕುಳ ನೀಡುತ್ತಿರುವ ಬಗ್ಗೆ ತಿಳಿಸುತಿದ್ದರು.

ಮದುವೆಯಾಗಿ ಸುಮಾರು ಎರಡು ವರ್ಷಗಳಾದ ಮೇಲೆ ಪ್ರಾಸಾ-3 ರವರ ಅಜ್ಜಿಗೆ ಹುಶಾರ ಇಲ್ಲದ ಕಾರಣ ನಾನು ಪ್ರಾಸಾ-3 ರವರ ಮನೆಗೆ ಹೋದಾಗ, ರುದನೂರದಿಂದ ಒಬ್ಬ ವ್ಯಕ್ತಿ ಪ್ರಾಸಾ-3 ರವರ ಮನೆಗೆ ಬಂದು ಪ್ರಾಸಾ-3 ರವರ ತಾಯಿಗೆ ಪ್ರಾಸಾ-3 ರವರು ಹುಶಾರ ಇಲ್ಲದ ಕಾರಣ ಬನ್ನಿ ಎಂದು ತಿಳಿಸಿರುತ್ತಾನೆ. ಆದ್ದರಿಂದ ನಾನು ಮತ್ತು ಪ್ರಾಸಾ-3 ರವರ ತಾಯಿಯಾದ ಪ್ರಾಸಾ-6 ರವರು

ಸೇ ರಿ ರುದನೂರದಲ್ಲಿರುವ 1ನೇ ಆರೋಪಿಯ ಮನೆಗೆ ಹೋಗಿರುತ್ತೇವೆ. ನಾವು ಅಲ್ಲಿ ಹೋಗುವಷ್ಟರಲ್ಲಿ ಪ್ರಾಸಾ-3 ರವರು ಪ್ರಜ್ಞೆ ತಪ್ಪಿ ಬಿದಿದ್ದರು. ನಂತರ ಸೇಡಂ ಸರಕಾರಿ ಆಸ್ಪತ್ರೆಗೆ ಪ್ರಾಸಾ-3 ರವರನ್ನು ಕರೆದುಕೊಂಡು ಹೋಗಿರುತ್ತೇವೆ. ಸೇಡಂ ಆಸ್ಪತ್ರೆಯಲ್ಲಿ ವೈದ್ಯರು ನಮಗೆ ತಿಳಿಸಿದ್ದೇನೆಂದರೆ ಇದು ಆತ್ಮ ಹತ್ಯ ಪ್ರಕರಣ ಆಗಿರಬಹುದು ಆದ್ದರಿಂದ ಪೊಲೀಸರಿಗೆ ದೂರು ನೀಡಿ ಎಂದು ತಿಳಿಸಿರುತಾರೆ. ನಂತರ ಪ್ರಾಸಾ-3 ರವರ ಅಣ್ಣ, ತಮ್ಮ, ತಂದೆ-ತಾಯಿ ದೂರನ್ನು ನೀಡಿರುತ್ತಾರೆ.

ಪ್ರಾಸಾ-3 ರವರಿಗೆ ರಾತ್ರಿ ಕಾಲದಲ್ಲಿ ಪ್ರಜ್ಞೆ ಬಂದಿರುತ್ತದೆ. ಆಗ ಪ್ರಾಸಾ-3 ರವರು ನಮಗೆ ತಿಳಿಸಿದ್ದೇನೆಂದರೆ 1 ಹಾಗೂ ಎರಡನೆ ಆರೋಪಿತರು ಸೇರಿ ಓಡಣೆಯಿಂದ ಕುತ್ತಿಗೆಗೆ ಬಿಗಿದಿದ್ದಾರೆ ಎಂದು ತಿಳಿಸಿರುತಾರೆ. ಆ ಕಾಲಕ್ಕೆ ನಮ್ಮ ಜೊತೆ ಚಾಸಾ-14,ಶರಣಯ್ಯ , ಪ್ರಾಸಾ-6 ರವರು ಇದ್ದರು. ಈ ರೀತಿ ಪ್ರಾಸಾ-3 ರವರು ನಮಗೆ ಆಸ್ಪತ್ರೆಯಲ್ಲಿ ತಿಳಿಸಿರುತ್ತಾರೆ.

ಘಟನೆಯ ಬಗ್ಗೆ ನಾನು ಪೊಲೀಸರಿಗೆ ತಿಳಿಸಿದ್ದೇನೆ.

ಸಾಕ್ಷಿ ಒಂದು ಓಡಣಿ ತೋರಿಸಿ ಕೇಳಿದಾಗ ಇದೆ ಇರಬಹುದು ಎಂದು ನುಡಿದಿದ್ದಾರೆ. ಸಾಕ್ಷಿ ಪುನಃ ಮುಂದುವರೆದು ಪ್ರಾಸಾ-3 ರವರಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗುವ ಬಗ್ಗೆ ನನ್ನ ತಲೆಯಲ್ಲಿದ್ದ ಕಾರಣ ನಾನು ಓಡಣಿಯನ್ನು ನೋಡಿಲ್ಲ ಎಂದು ನುಡಿಯುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ಶ್ರೀಎಸ್. ಬಿ. ಕೆ. ವಕೀಲರು ಸಮಯ ಕೋರಿದ್ದರಿಂದ 500-00 ಖರ್ಚು ಕೂಡಲು ಆದೇಶಿಸಿ ಸಮಯ ನೀಡಲಾಯಿತು.**

**(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**
**ಓ.ಹೇ.ಕೇ. ಸರಿ ಇದೆ.**

**ಹೆಚ್ಚುವರಿ ಪ್ರ.ದ.ನ್ಯಾ.ದಂ. ಚಿಂಚೋಳಿ**